ಸಾಕ್ಷಿ. ಪಂಗನಾಮ ಹಾಕಲು ಪಾಪಪ್ರಜ್ಞೆ ಕಾಡುತ್ತಲೇ ಇರಲಿಲ್ಲ. ಕೊಡುತ್ತಿದ್ದ ದುಡ್ಡಿನ ಮೊತ್ತವಾದರೂ ಎಷ್ಟು? ವರ್ಷಾವಧಿಯ ಒಪ್ಪೊತ್ತಿನ ಊಟದ ಲೆಕ್ಕ ತೆಗೆದರೆ ಸಾಕೂ ಸಾಲದಷ್ಟು.

ಎಲ್ಲೇ ಇರಲಿ, ಮೈಮುರಿದು ದುಡಿದದ್ದಕ್ಕೆ ಪ್ರತಿಫಲ ವರ್ಷಕ್ಕೆರಡು ಕಗ್ಗು ಸೀರೆ. ಒಪ್ಪೊತ್ತಿನ ಊಟ. ಗಂಡನಿಲ್ಲದವಳು ತಲೆ ಬೋಳಿಸಿಕೊಂಡು, ಕೆಂಪು ಸೀರೆ ಉಟ್ಟು ಮಡಿಯಾಗಬೇಕಾದ್ದು ಬ್ರಾಹ್ಮಣ ಮನೆತನಗಳಲ್ಲಿನ ಕಟ್ಟುಪಾಡು. ಸಂಪ್ರದಾಯ. ಇಲ್ಲದಿದ್ದರೆ 'ಅಥೋ ಭ್ರಷ್ಟ, ತಥೋ ಭ್ರಷ್ಟ' ಆಗಬೇಕಾದ ಪರಿಸ್ಥಿತಿ. ಸಕೇಶಿ ಮಾಡಿದ ಅಡುಗೆ ದೇವರ ನೈವೇದ್ಯಕ್ಕೆ ಬರುವುದಿಲ್ಲ. ಮಡಿ ಮಾಡಿಸಿಕೊಳ್ಳದಿದ್ದರೆ ಅವಳ ತಲೆಕೂದಲಿನಿಂದ ಬೀಳುವ ಒಂದೊಂದು ಹನಿ ನೀರಿಗೂ ಗಂಡನಿಗೆ ಪರಲೋಕದಲ್ಲಿ ನರಕಶಿಕ್ಷೆ ಅನ್ನುವ ನಂಬಿಕೆ. ಶಿವರಾಮನ ಅಕ್ಕ ಕಮಲ ಎಲ್ಲರ ಮಾತನ್ನೂ ಮೀರಿ ನಿಂತಿದ್ದು ಗಂಡನ ಮನೆಯವರಿಗೆ ಬಿಸಿತುಪ್ಪ. ಶಿವರಾಮನ ಅಪ್ಪ ಬದುಕಿದ್ದಾಗಲೇ ಮಗಳ ಮದುವೆ ಮಾಡಿ ಮುಗಿಸಿದ್ದರು. ಮಗನ ಪಾಲಿಗೆ ಯಾವ ಜವಾಬ್ದಾರಿಯನ್ನೂ ಉಳಿಸಿಲ್ಲ ಎಂದು ಅವರಿಗೆ ಕೊಂಬು. ವಿಧಿಯ ಆಟ ಯಾರಿಗೆ ಗೊತ್ತಿರುತ್ತದೆ? ಗಟ್ಟಿಮುಟ್ಟಾಗಿ ನೂರು ವರ್ಷ ಬದುಕುತ್ತಾನೆ ಎನ್ನುವಂತಿದ್ದ ಕಮಲನ ಗಂಡ ಮದುವೆಯಾಗಿ ವರ್ಷ ಕಳೆಯುವುದರಲ್ಲಿ ಪೆಟ್ಟಿಗೆ ಕಟ್ಟಿದ. ಮಳೆಗಾಲಕ್ಕೆ ಸೌದೆ ಒಟ್ಟು ಹಾಕಲು ಕೆಲಸದಾಳನ್ನು ಕರೆದುಕೊಂಡು ಕಾನು ಹೊಕ್ಕವನು ಹೆಜ್ಜೇನುಗಳ ದಾಳಿಗೆ ಸಿಕ್ಕಿ, ಮೈಯಿಡೀ ಬಾತುಕೊಂಡು, ನಂಜು ಏರಿ, ಯಾವ ಚಿಕಿತ್ಸೆಗೂ ಬದುಕುಳಿಯಲಿಲ್ಲ. ದಿಗ್ಭ್ರಮೆಯಿಂದ ಮರಗಟ್ಟಿ ಹೋಗಿದ್ದಳು ಹದಿನೇಳರ ಬಾಲೆ. ಗಾಯದ ಮೇಲೆ ಬರೆ ಎಳೆದಂತೆ ಕೂದಲು ತೆಗೆಸಬೇಕೆಂದು ಗಂಡನ ಮನೆಯವರ ಒತ್ತಾಯ.

'ಗಂಡನ ಮನೇಲಿ ಕೂದಲು ತೆಗೆಸಿ ಮನೆ ಚಾಕರಿಗೆ ಹಾಕ್ಕಂತಾರೆ' ಅಂತ ಗಂಡನ ಮನೆ ಬಿಟ್ಟು ರಾತ್ರೋರಾತ್ರಿ ತೌರಿಗೆ ಓಡಿ ಬಂದಿದ್ದಳು ಕಮಲಾ. ಇನ್ನೂ ಹಡೆಯುತ್ತಿದ್ದರಂತೆ ಅವಳ ಅತ್ತೆ. ಅಲ್ಲೇ ಇದ್ದಿದ್ದರೆ ಕಮಲಾ ಅಂದುಕೊಂಡಿದ್ದು ಸತ್ಯವಾಗುವುದರಲ್ಲಿ ಅನುಮಾನ ಇರಲಿಲ್ಲ. ದುರದೃಷ್ಟ ಎಷ್ಟಿತ್ತು ಅಂದರೆ ಒಬ್ಬಳೇ ಮಗಳೆಂದು ಅಪ್ಪನ ಮನೆಯಲ್ಲಿ ಕೈ ಬಿಚ್ಚಿ ಹಾಕಿದ್ದ ನಗ–ನಟ್ಟು ಮಾವನ ತಿಜೋರಿಯಲ್ಲಿ ಉಳಿದುಹೋಗಿತ್ತು. ಎಲ್ಲರ ಮನೆಯ ಹಣೇಬರವೂ ಇದೇ. ಕಿಮ್ಮತ್ತಿನ ವಸ್ತು ಒಡವೆಗಳು ಅಂದರೆ ಅವು ಮನೆ ಯಜಮಾನನ ತಿಜೋರಿಯಲ್ಲಿ ಭದ್ರವಾಗಿರುತ್ತಿದ್ದವು. ಹೆಣ್ಣು ಹೆಂಗಸರು ಅವನ್ನು ಎಲ್ಲಿಟ್ಟು ಕಾಪಾಡಿಕೊಳ್ಳುತ್ತಾರೆ? ಹೆಚ್ಚಿನದೆಲ್ಲವನ್ನೂ ತೆಗೆದು ಮನೆ ಯಜಮಾನನ ಕೈಗೆ ಒಪ್ಪಿಸಿರುತ್ತಾರೆ. ಅವರು ಅದನ್ನು ಭದ್ರವಾಗಿ ತಿಜೋರಿಯಲ್ಲಿಟ್ಟು ಬೀಗ ಹಾಕಿ, ಬೀಗದಕೈಯನ್ನು ಜನಿವಾರದಲ್ಲಿ ಕಟ್ಟಿಕೊಂಡು ಜೋಪಾನವಾಗಿರಿಸಿಕೊಂಡಿರುತ್ತಾರೆ. ಹಬ್ಬಹರಿದಿನಗಳಲ್ಲೋ, ವಿಶೇಷ ಕಟ್ಲೆಗೆ ಹೋಗಬೇಕಾದಾಗಲೋ ಅಥವಾ ಮನೆಯಲ್ಲಿ ಸಂತರ್ಪಣೆ ಮನೆ ಎದ್ದಾಗಲೋ, ಯಜಮಾನ ನಗ ನಟ್ಟು ತೆಗೆದು ಹೆಂಗಸರಿಗೆ ಕೊಡಬೇಕು. ಅವರು ಉಟ್ಟು, ತೊಟ್ಟು ಸಂತೃಪ್ತಿ ಪಡಬೇಕು. ಮತ್ತೆ ಅವೆಲ್ಲಾ ಯಜಮಾನನ ತಿಜೋರಿಗೆ ರವಾನೆ. ಗಂಡನ ಮನೆಯಿಂದ ಕದ್ದು ಓಡಿ ಬಂದವಳ ಒಡವೆವಸ್ತುಗಳು ಗಂಡನ ಮನೆಯಲ್ಲಿ ಉಳಿದುಹೋದುವು. ಸೊಸೆ ಮನೆತನದ ಮರ್ಯಾದೆ ಹರಾಜು ಹಾಕಿದಳೆಂದು, ರೀತಿರಿವಾಜು ಮುರಿದಳೆಂದು ಗಂಡನ ಮನೆಯವರಿಗೆ ಅವಳ ಮೇಲೆ ಕೆಂಡದಂಥ ಕೋಪ.

'ಒಂದಿನ ಅದನ್ನ ಹಿಡಿದು ತಲೆ ಬೋಳಿಸದಿದ್ರೆ ನಾವು ಗಂಡಸ್ರೇ ಸುಳ್ಳು...' ಎಂದು ಅವಳ ಭಾವದಿಕ್ಕಳು ಶಪಥ ಮಾಡಿದ್ದರಂತೆ. ಜೀವನಾಂಶ ಸಾಯಲಿ, ತಾವು ಹಾಕಿದ ಚಿನ್ನ ಬಣ್ಣ ವಾಪಸು ಬಂದರೆ ಮಗಳ ಆಪತ್ಕಾಲಕ್ಕೆ ಒದಗುತ್ತೆ ಎಂದು ಅವಳ ಅಪ್ಪ ಸಂಧಾನಕ್ಕೆ ಹೋಗಿದ್ದರು. ಅಲ್ಲಿ ಅವರ ಮಕಕ್ಕೆ ಸಮಾ ಮಂಗಳಾರತಿ ಆಯಿತಂತೆ ಎನ್ನುವುದು ಗಾಳಿ ಸುದ್ದಿ. 'ಮಗಳಿಗೆ ಎಂಥಾ ಸಂಸ್ಕಾರ ಕಲಿಸಿದೀರಿ?' ಎಂದು ಅವಳ ಅಪ್ಪ ಹಂಗಿಸಿಕೊಂಡು ಕಣ್ಣೀರು ಹಾಕಿದರಂತೆ. ಆದರೂ ಆ ಜನ ಕರಗಲಿಲ್ಲ. 'ತಲೆ ಬೋಳಿಸುವ' ಮಾತು ಆಗಲೇ ಬಂದಿದ್ದಂತೆ. 'ಬಂದ ದಾರಿಗೆ ಸುಂಕ ಇಲ್ಲ' ಎಂದು ಬ್ರಾಹ್ಮಣ ಕಾಲೆಳೆದುಕೊಂಡು ವಾಪಸು ಬರುವಾಗ ಜೀವ ಸೋತು ಹೋಗಿ ಹಾದಿ ಬದಿಯ ಮರಕ್ಕೆ ವರಗಿ ಕೂತಿದ್ದಷ್ಟೇ ಗೊತ್ತು, ಯಾವ ಮಾಯದಲ್ಲೋ ದೊಡ್ಡ ಜೀವ ಹೊರಟುಹೋಯ್ತು. 'ರಣ ಹೊಡೆದುಕೊಂಡು ಹೋಗಿದ್ದು' ಎನ್ನುವುದು ಒಂದು ಹೇಳಿಕೆ.

'ಅಳಿಯನ ಮನೆಯಲ್ಲಿ ವಿಷ ಹಾಕಿದ್ದು' ಅಂತ ಮತ್ತೊಂದು. ಸತ್ಯ ಪರಮಾತ್ಮನೊಬ್ಬನಿಗೆ ಗೊತ್ತು. ಗೊತ್ತಿರುವವರು ಹೇಳುವುದಿಲ್ಲ, ಹೇಳುವಂತವರು ಬದುಕಲಿಲ್ಲ. ಯಾರೋ ದಾರಿಹೋಕರು ನೋಡಿ ಮನೆಗೆ ವರ್ತಮಾನ ತಲುಪಿಸದಿದ್ದರೆ ನಾಯೋ, ನರಿಯೋ ಎಳೆದುಕೊಂಡು ಹೋಗಿ ಹಬ್ಬ ಮಾಡುವ ಪರಿಸ್ಥಿತಿ. ಪುಣ್ಯಕ್ಕೆ ಅದೊಂದು ಆಗಲಿಲ್ಲ. ಗಾಡಿದಾರಿಯ ಬದಿಯಲ್ಲೇ ಕಾನು. ಹಾದಿ ಬದಿಯಲ್ಲಿ ಮುಂದು ಮುಂದಕ್ಕೆ ಹೋದರೆ ಕಗ್ಗಾನು ಕಾಡು. ಹುಲಿ, ಕುರ್ಕಗಳು ಹಗಲು ಹೊತ್ತಲ್ಲೂ ಓಡಾಡುವ ಜಾಗ. 'ಏನಾಯ್ತು? ಏನಾಯ್ತು? ಏನಾಯ್ತು?' ಎಂದು ಮನೆ ಮಂದಿ ಆ ದುಃಖದ, ಸಂಕಟದ ಸಮಯದಲ್ಲೂ ತಲೆಕೆಡಿಸಿಕೊಂಡಿದ್ದರು. ಅಲ್ಲಿಯದನ್ನು ಇಲ್ಲಿಗೆ, ಇಲ್ಲಿಯದನ್ನು ಅಲ್ಲಿಗೆ ತಂದು ವರೆಯುವ ನಾರದರು ಎಲ್ಲಾ ಕಡೆಯಲ್ಲೂ ಒಬ್ಬರಿಬ್ಬರಾದರೂ ಇದ್ದೇ ಇರುತ್ತಾರೆ. 'ಹೀಗಾಯ್ತಂತೆ..., ಹೀಗಾಯ್ತಂತೆ...' ಎನ್ನುವ ಗಾಳಿ ಸುದ್ದಿ ಬಂತು. ಇನ್ನೂ ಹುಡುಗ ಶಿವರಾಮ. ಆಗಲೇ ಮನೆಯ ಜವಾಬ್ದಾರಿ ತಲೆಯ ಮೇಲೆ ವರಗಿಕೊಂಡಿದೆ. 'ಅವರನ್ನ ಸುಮ್ನೆ ಬಿಡಲ್ಲ ಕಣೇ. ಅಪ್ಪನಿಗೆ ಮತ್ತೇನಾಗಿದ್ದಲ್ಲ, ಎದೆ ಒಡ್ಕಂಡಿದ್ದು ಅವನು' ಎಂದು ಹುಡುಗ ಅಂದಾಜು ಮಾಡಿದ್ದ. ಕಮಲಾ ಅಪ್ಪನ ಮನೆ ಸೇರಿಕೊಂಡು ಹತ್ತಾರು ವರ್ಷ ಕಳೆದಿದ್ದರೂ ಇನ್ನೂ ಶಿವರಾಮನ ಎದೆಯಲ್ಲಿ ಆ ಬೆಂಕಿ ಆರದೆ ಉಳಿದುಕೊಂಡಿದೆ. ಕೋರ್ಟು, ಕಚೇರಿ ಅಂದರೆ ಜನ ಹೆದರಿ ಹಿಂದೆಗೆಯುತ್ತಿದ್ದ ಕಾಲ. ಹಾಗಾಗಿ ದುಡ್ಡಿನ ಪೊಗರು ಜಾಸ್ತಿ ಇದ್ದವರು ಆಡಿದ್ದೇ ಆಟ. ಕೊಲೆ ಮಾಡಿ ದಕ್ಕಿಸಿಕೊಂಡವರ ಕಥೆಗಳು ಅಲ್ಲಲ್ಲಿ ಚಾಲ್ತಿಯಲ್ಲಿದ್ದುವು.

'ಕೊಂದು ಅಡಿಕೆ ಮರದ ಬುಡದಲ್ಲಿ ಹೂತು ಹಾಕಿದ' ಕಥೆಗಳು ಆಗೀಗ ಗಾಳಿಯಲ್ಲಿ ಹಾರಾಡುತ್ತಿದ್ದುವು. 'ನೋಡ್ತಿರು, ನಾನೂ ಒಂದಿನ...' ಎಂದು ಹೇಳ ಹೊರಟ ಶಿವರಾಮನನ್ನು ವೆಂಕಮ್ಮ ಅವನ ಬಾಯಿಗೆ ಕೈ ಅಡ್ಡ ಇಟ್ಟು ಮುಂದೆ ಉಸಿರೊಡೆಯದಂತೆ ತಡೆದಿದ್ದರು.

'ಮಾರಾಯಾ, ನಮ್ಮ ಗ್ರಾಚಾರಾನೇ ನೆಟ್ಟಗಿಲ್ಲ. ಒಟ್ಟೊಟ್ಟಿಗೆ ನಿನ್ನ ಭಾವನನ್ನ, ಅಪ್ಪನ್ನ ಕಳ್ಕೊಂಡಿದ್ದಾಗಿದೆ. ನೀನು ಮತ್ತೊಂದೇನೋ ಕುತ್ತಿಗೆಗೆ ತಂದಿಡ್ಬೇಡ, ದೇವ್ರಿದಾನೆ, ನೋಡ್ಕಂತಾನೆ...'

'ಎಲ್ಲಿದಾನೆ ನಿನ್ನ ದೇವ್ರು? ಕಡುಬು ತಿಂತಾ ಕೂತ್ಗಂಡಿದಾನಂತಾ?'

'ಬ್ಯಾಡ ಕಣೋ, ದೇವರ ಸುದ್ದಿಗೆ ಹೋಗ್ಬೇಡ...'

ವೆಂಕಮ್ಮ ಮಗನಿಂದ ಆಣೆ–ಭಾಷೆ ಹಾಕಿಸಿಕೊಂಡು ಎದೆಯ ತಳಮಳವನ್ನು ಹತ್ತಿಕ್ಕಿಕೊಂಡಿದ್ದರು. 'ಮಗನ ಕುತ್ತಿಗೆಗೊಂದು ಕುಂಟೆ ಕಟ್ಟಿದರೆ ಅವನು ಹಾದಿಗೆ ಬರುತ್ತಾನೆ, ಅತಿರೇಕದ ಸಾಹಸಕ್ಕೆ ಕೈ ಹಾಕುವುದಿಲ್ಲ' ಎಂದು ವೆಂಕಮ್ಮ ಅವರ ಅನುಭವಕ್ಕೆ ತಕ್ಕಂತೆ ಯೋಚನೆ ಮಾಡಿದ್ದರು. 'ಯಾವನಿಗೆ ಬೇಕು ಮದುವೆ? ಮದುವೆ ಮಾಡ್ಕಂಡು ಸುಖ ಸುರ್ಕಂಡೋರನ್ನ ನೋಡ್ತಿದೀನಲ್ಲ...' ಎನ್ನುತ್ತಾ ಅಮ್ಮನ ಮಾತನ್ನು ತಟ್ಟಿ ಹಾರಿಸುತ್ತಿದ್ದ ಶಿವರಾಮ, ವಯಸ್ಸಿಗೆ ತಕ್ಕ ದೇಹದ ಬಯಕೆಗೆ ಮಣಿದು ಕೊನೆಗೂ ಮದುವೆಯಾಗಲು ಸಮ್ಮತಿಯ ಮುದ್ರೆ ಒತ್ತಿದ್ದ. ವೆಂಕಮ್ಮ ಈ ಹಳೆಯ ಪುರಾಣವನ್ನೆಲ್ಲಾ ಸೊಸೆ ಸೀತಾಲಕ್ಷ್ಮಿಯ ಕಿವಿಗೆ ಊದಿದ್ದರು.

'ಇಷ್ಟು ಕಷ್ಟ, ನೋವು ಅನುಭೋಗಿಸಿದೋನು ಇನ್ನು ಹಂಗಿರೋಕೆ ಸಾಧ್ಯ? ಮಾತೆತ್ತಿದ್ರೆ ಸಿಟ್ಟೊಂದು ಮೂಗಿನ ತುದೀಲಿರುತ್ತೆ. ನನ್ನ ಮಗ ಒಳ್ಳೆಯೋನು, ನೀನು ಸ್ವಲ್ಪ ಅನುಸರಣೆ ಮಾಡ್ಕಂಡು ಹೋಗ್ಬೇಕು ಕಣೇ' ಅಂದಿದ್ದರು ಅತ್ತೆ. ಅನುಸರಣೆ ಮಾಡಿಕೊಂಡು ಹೋಗುವುದಕ್ಕೂ ಒಂದು ಮಿತಿ ಇರುವುದಿಲ್ಲವಾ? ಕಷ್ಟ ಅನುಭೋಗಿಸಿದ್ದು ಅವನು ಮಾತ್ರವಾ? ಅನುಭವಿಸುತ್ತಿಲ್ಲವಾ ವೆಂಕಮ್ಮ? ಕಮಲಾ? ತೌರು ಸೇರಿಕೊಂಡು ಇಷ್ಟು ವರ್ಷ ಕಳೆದಿದ್ದರೂ ಗಂಡನ ಮನೆಯವರು ತಲೆ ಬೋಳಿಸುವ ಮಾತಾಡಿದ್ದು ಅವಳ ಮನಸ್ಸಿಂದ ಮರೆಯಾಗಿಲ್ಲ. ತಂಬಿಗೆ ತೆಗೆದುಕೊಂಡು ಗುಡ್ಡಕ್ಕೆ ಹೋಗುವುದಕ್ಕೂ ಹೆದರಿ ಸಾಯುತ್ತಾಳೆ. ದಿನಾ ಒಂದೇ ಹೊತ್ತಿಗೆ ಹೋಗದೆ ಹೊತ್ತು ಬದಲಾಯಿಸುತ್ತಾಳೆ. ಕೆಲವು ಸಲ ಯಾವುದೋ ಹೆಳೆ ಮಾಡಿಕೊಂಡು ವೆಂಕಮ್ಮನೂ ಮಗಳ ಜೊತೆ ಗುಡ್ಡ ಹತ್ತುವುದಿದೆ. ತೀರಾ ಅವಸರವಾದರೆ, ಹೊಟ್ಟೆ ಕೆಟ್ಟರೆ ಹತ್ತಿರದಲ್ಲಿ ಎಲ್ಲಾದರೂ ಮರೆ ಹುಡುಕಿ ಕೂರಬಹುದಾದ ವಿನಾಯಿತಿ ಇದ್ದರೂ ಶಿವರಾಮನಿಗೆ ಅಂತಾದ್ದೆಲ್ಲಾ ಇಷ್ಟವಾಗುವುದಿಲ್ಲ. 'ಯಾರದು ಮನೆ ಬದೀಲಿ ಹೇತು ಹಾಕಿದ್ದು?